# ಪುಸ್ತಕ ಪರಿಚಯ

## ಮುದ್ದುರಾಮನ ಮನಸು

ಲೇಖಕ : ಶ್ರೀ ಕೆ.ಸಿ. ಶಿವಪ್ಪ

ಪ್ರಕಾಶಕರು : ಎಂ.ಪಿ. ಬಿರ್ಲಾ ಫೌಂಡೇಷನ್,
ಭಾರತೀಯ ವಿದ್ಯಾಭವನ, ಬೆಂಗಳೂರು.

ಪುಟ : ೨೮೪ + ೩೦, ಬೆಲೆ: ಸಾದಾಪ್ರತಿ – ರೂ. ೮೭
ಉತ್ತಮಪ್ರತಿ – ರೂ. ೯೮

ಶ್ರೀ ಕೆ.ಸಿ. ಶಿವಪ್ಪನವರ 'ಮುದ್ದುರಾಮನ ಮನಸು' ಕೃತಿ ನನಗೆ ಓದಲು ದೊರಕಿದ್ದೇ ಒಂದು ಯೋಗಾಯೋಗ. ಇದು ಡಿ.ವಿ.ಜಿ.ಯವರ ಪ್ರಖ್ಯಾತ ಕೃತಿ 'ಮಂಕುತಿಮ್ಮನ ಕಗ್ಗ' ದಿಂದ ಪ್ರಭಾವಿತವಾಗಿ, ಅದರ ಮಾರ್ಗದರ್ಶನದಲ್ಲಿ ರಚಿತವಾಗಿದೆ. ಆದರೆ ಇಲ್ಲಿ 'ತಿರುಳ್ಗನ್ನಡ'ದ ಓಟ, ಪದಬಂಧಗಳಲ್ಲಿ ಬಳಸಿದ ಸಂಧಿಸಮಾಸಗಳು, ಅಲ್ಲಿಗಿಂತ ಹೆಚ್ಚು ಸುಲಭವಾಗಿವೆ. ಭಾವಗಳೂ ಹಗುರವಾಗಿದ್ದು ಮನೋಜ್ಞವಾಗಿವೆ. ಡಾ. ಪ್ರಭುಶಂಕರರೆನ್ನುವಂತೆ, 'ಕಾವನೊರ್ವನಿರಲ್ಕೆ ಜಗದ ಕಥೆಯೆಂತಿಂತು?' ಮುಂತಾದ ಪ್ರಶ್ನೆಗಳು ಡಿ.ವಿ.ಜಿ.ಯವರನ್ನು ಕಾಡಿದಷ್ಟು ತೀವ್ರವಾಗಿ ಶ್ರೀ ಕೆ.ಸಿ ಶಿವಪ್ಪನವರನ್ನು ಕಾಡಿದಂತೆ ತೋರುವುದಿಲ್ಲ. 'ಭಾವಶುದ್ಧಿಯೆ ದೈವ' ಎನ್ನುವ ಶಿವಪ್ಪನವರಿಗೆ ದೇವರ ಇರುವಿಕೆಯಲ್ಲಿ, ಅವನ ಕೃಪೆಯಲ್ಲಿ ಅಪಾರ ನಂಬಿಕೆ. ನಮ್ಮನ್ನೂ ನಂಬುವಂತೆ ಬಹುವಾಗಿ ಓಲೈಸುತ್ತಾರೆ.

'ನೀನು ಸೋರುವ ಮೂಗು; ಹೊಳೆವ ಮೂಗುತಿ ಅವನು.
ಈ ನೆಲದ ಕೆಸರು ನೀ; ಅವನು ಚೆಲು ಕಮಲ.
ಅವನು ಗಗನದ ತಾರೆ; ನೀನೊಂದು ಕಿರುಸೊಡರು
ಉಪಮೆ ಎಲ್ಲಿದೆ ಇಲ್ಲಿ?— ಮುದ್ದುರಾಮ.' (೧೧೦)

ಎಂದು ಅವರು ಹೇಳುವಾಗ ನಮಗೂ 'ಹೌದು, ಹೌದು, ಉಪಮೆ ಎಲ್ಲಿದೆ ಇಲ್ಲಿ?' ಎನ್ನಿಸದೆ ಇರದು.

ಕೆಲವೊಮ್ಮೆ ಶಿವಪ್ಪನವರು ಹೇಳುವ ಸತ್ಯ ಮುಖಕ್ಕೆ ರಾಚಿದಂತಿರುತ್ತದೆ:

'ಹೊಸದಾವುದಿದೆ ಇಲ್ಲಿ?ಎಲ್ಲ ಬರಿ ಮಾರ್ಪಾಟು
ಅದೆ ನೀರು ಅದೆ ಕಣಿವೆ, ಕಾಲದಲೆ ಬೇರೆ.
ನಯನದಂತಿದೆ ನೋಟ ಅನುದಿನದ ಗತಿಯೆಲ್ಲ
ಹೊಸತು ಮನಸಿನ ಭಾವ— ಮುದ್ದುರಾಮ.' (೩೬೫)

ಶಿವಪ್ಪನವರಿಗೂ ಗೊತ್ತು —

'ಸುಲಭವೆಂದರೆ ಸುಲಭ ತಾತ್ತ್ವಿಕತೆ ಉಪದೇಶ;
ಮುಗ್ಧಜನ ಎದುರಿಗಿರೆ ಮಾತಿಗೇನಂತೆ?
ನುಡಿದಂತೆ ನಡೆ ನೀನು, ನಡೆದಂತೆ ನುಡಿ ನೀನು
ಮಾತಿಗಿದೆ ಬಲುಶಕ್ತಿ — ಮುದ್ದುರಾಮ.' (೧೦೮೨)

ಆದ್ದರಿಂದಲೇ ಅವರು ಆತ್ಮಾವಲೋಕನ ಮಾಡಿಕೊಳ್ಳುತ್ತಾರೆ:

'ನನ್ನ ತಿದ್ದದ ಬರಹ ಏಕೆ ಬರೆದೆನೊ ಕಾಣೆ;
ಇದ್ದೀತು ಸುಳಿಹಳ್ಳಗಳ ತೋರುವಾಸೆ.
ಇಷ್ಟಾಗಿ, ಕೈಸುಡದೆ ಅನುಭವಕೆ ಬೆಲೆಯಿಲ್ಲ;
ಊದು ನೀ ತುತ್ತೂರಿ !— ಮುದ್ದುರಾಮ.' (೭೨೧)

'ಕವನ ದೇವನ ನಗೆಯೊ!– ಮುದ್ದುರಾಮ' ಎನ್ನುವ ಶಿವಪ್ಪನವರಿಗೆ ಕವಿತೆಯ ರಚನೆ ದೈವ ಕೃಪೆಯಿಲ್ಲದೆ ಸಾಧ್ಯವಿಲ್ಲ ಎಂಬುದರ ಅರಿವೂ ಇದೆ. ಜೀವನಾನುಭವ, ರಸಾನುಭೂತಿ, ಉಪದೇಶಾಮೃತ ಎಲ್ಲವೂ ಮೇಳೈಸಿದಂತಿರುವ 'ಮುದ್ದುರಾಮನ ಮನಸು' ಹೆಚ್ಚು 'ಕವಿಸಮಯ' 'ಕಾಂತಾಸಮ್ಮಿತಿ'ಗಳಿಲ್ಲದೆ 'ಸುಲಿದ ಬಾಳೆಯ ಹಣ್ಣಿನಂದದಿ ಕಳೆದ ಸಿಗುರಿನ ಕಬ್ಬಿನಂದದಿ ಸುಲಭ' ವಾಗಿರುವುದು ಕನ್ನಡಿಗರ ಪುಣ್ಯವೆಂದೇ ಹೇಳಬೇಕು. 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದುಕೊಳ್ಳುವ ಜನರು ಈ ಕೃತಿಯನ್ನು ಓದಿದರೆ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಮುದ್ದುರಾಮನ ಮನಸ್ಸನ್ನು ಚೊಕ್ಕವಾಗಿ, ಮುದ್ದಾಗಿ ಮುದ್ರಾರಾಕ್ಷಸನ ಹಾವಳಿಯಿಂದ ಮುಕ್ತವಾಗಿರಿಸಿರುವ ಪ್ರಕಾಶಕರಿಗೂ ಕನ್ನಡಿಗರ ಅಭಿನಂದನೆ ಸಲ್ಲಬೇಕು. —ಡಾ. ಹೆಚ್.ರಾಮಚಂದ್ರ ಸ್ವಾಮಿ

## ಸ್ಫೂರ್ತಿಕಿರಣ

ಲೇಖಕ : ಪಿ. ಗೋವಿಂದಪ್ಪ

ಪ್ರಕಾಶಕರು : ಶ್ರೀರಾಮಕೃಷ್ಣ ಆಶ್ರಮ, ದಾವಣಗೆರೆ

ಪುಟ : 174; ಬೆಲೆ: ರೂ. 40.00

ಇದೊಂದು ಕವನಸಂಕಲನ; ಹಾಡಲು ಯೋಗ್ಯವಾದ ೧೨೭ ಪದ್ಯಗಳು ಇಲ್ಲಿವೆ. ಇದರ ಕರ್ತೃ "ಖುಷಿಯಾಗಿ ಜೀವನವ ನಡೆಸಬಲ್ಲೆ" ಎಂದು ಇತರರಿಗೆ ಭರವಸೆ ಕೊಡಬಲ್ಲವರು; ಅದರಂತೆ ಸ್ವತಃ ಬದುಕುತ್ತಿರುವವರು. ಎಂತಲೆ ಈ ಕೃತಿ ತಕ್ಕಮಟ್ಟಿಗೆ ವಿಶಿಷ್ಟವಾಗಿದೆ ಎನ್ನಬಹುದು. ಇಲ್ಲಿನ ರಚನೆಗಳನ್ನು ಕಲೆಯ ದೃಷ್ಟಿಯಿಂದ ನೋಡುವುದು ಸಾಧುವಾಗಲಾರದು; ಏಕೆಂದರೆ ಭಕ್ತಿ, ಅನುಭಾವಗಳ ನೆಲೆಯಿಂದ ಮೂಡಿದ ಉದ್ಗಾರಗಳಿವು. ಎಂದಾಕ್ಷಣ, ಇವುಗಳಲ್ಲಿ ಕಲೆ ಇಲ್ಲವೆ ಇಲ್ಲವೆಂದಲ್ಲ. ಉದಾಹರಣೆಗೆ, 'ದರ್ಶನ' ಎಂಬ ಕವನದ ಈ ಸಾಲುಗಳನ್ನು ಲಕ್ಷಿಸಬಹುದು:

ಸುತ್ತಿಕೊಂಡಿಹ ಮಾಯೆ ಪರದೆಯು
ಕಿತ್ತುಹೋಯಿತು ಸ್ವಾನುಭವದಲಿ
ಎತ್ತ ನೋಡಲು ತಾನೇ ಬೆಳಗಿಹ
ನಿತ್ಯ ನಿರುಪಮ ಪಾವನ

ಉನ್ನತವಾದ ಅಭೀಪ್ಸೆಗಳನ್ನು ಅಭಿವ್ಯಕ್ತಿಸುವ ಈ ಸಂಚಯದ ಕವನಗಳೆಲ್ಲ ಒಂದೆ ಎತ್ತರದವಲ್ಲ; ಏರಿಳಿತ ಸಹಜ. ಇದೊಂದು ನೀತಿಸಂಹಿತೆಯೂ ಹೌದು; ಶುಚಿ ಜೀವನವನ್ನು ನಡೆಸಲು ಸಮಾಜಕ್ಕೆ ಬೇಕಾದ "ಸ್ಫೂರ್ತಿ", ಮಾರ್ಗದರ್ಶನ ಇಲ್ಲಿವೆ. ಮುತ್ತಿರುವ ಕತ್ತಲನ್ನು ತುಸುವಾದರೂ ಕಳೆಯಬಲ್ಲ "ಕಿರಣ" ಸಮೂಹವನ್ನು ಲೇಖಕರು ಇಲ್ಲಿ ಕೊಟ್ಟಿದ್ದಾರೆ. "ದೇವಗಾಳಕ್ಕೆ ಸೆರೆಸಿಕ್ಕ ಮೀನು" ಮುಂತಾದ ಒಳ್ಳೆಯ ರೂಪಕಗಳು, ಉಪಮೆಗಳು ಅಲ್ಲಲ್ಲಿ ಮಿಂಚಿ, ಮನಸೆಳೆಯುತ್ತವೆ. ಅಧ್ಯಾತ್ಮ ಪಿಪಾಸುಗಳಿಗೆ ಪ್ರಿಯವಾಗಬಲ್ಲ ಇಂಥ ದಾರ್ಶನಿಕ ಕೃತಿಯೊಂದನ್ನಿತ್ತ, ಪಿ. ಗೋವಿಂದಪ್ಪನವರಿಗೆ ಅಭಿನಂದನೆ, ವಂದನೆ ಸಲ್ಲಬೇಕು. *—ಡಾ. ಸಿ.ಪಿ.ಕೆ.*